ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105

ಕುಲಸಚಿವರು (ಮೌಲ್ಯಮಾಪನ)

ದೂರವಾಣಿ: 08392-241011

ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಸ್ನಾತಕ/2018–19/29

ದಿನಾಂಕ: 02.04.2018

## ಸುತ್ತೋಲೆ

ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟ ಎಲ್ಲಾ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಬಯಸುವುದೇನೆಂದರೆ, ಈಗಾಗಲೇ ದಿನಾಂಕ: 14.03.2018 ರಂದು ಪ್ರಕಟಿಸಿದ ಪರೀಕ್ಷಾ ಅಧಿಸೂಚನೆಯನ್ವಯ ಅನ್ಯರಾಜ್ಯ ಹಾಗೂ ಅನ್ಯಮಂಡಳಿಯಿಂದ ಬಂದಿರುವ 866 ಸ್ನಾತಕ ಪದವಿ 4ನೇ ಮತ್ತು 6ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. ಕರ್ನಾಟಕ ಉಚ್ಚನ್ಯಾಯಾಲಯ, ಧಾರವಾಡ ಪೀಠದ ಮಧ್ಯಂತರ ಆದೇಶ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಮತ್ತು ಕುಲಸಚಿವರು (ಆಡಳಿತ) ಇವರ ಪತ್ರದ ಮೇರೆಗೆ, 2015–16 ಮತ್ತು 2016–17ನೇ ಸಾಲಿನಲ್ಲಿ ಸ್ನಾತಕ ಪದವಿಯ ಪ್ರವೇಶದ ಅರ್ಹತಾ ಪಟ್ಟಿಯನ್ನು ತಡೆಹಿಡಿದ ಅನ್ಯ ರಾಜ್ಯ ಹಾಗೂ ಅನ್ಯ ಪರೀಕ್ಷಾ ಮಂಡಳಿಗಳಿಂದ ಬಂದಿರುವ ಸಂಬಂಧಪಟ್ಟ 866 ವಿದ್ಯಾರ್ಥಿಗಳಿಗೆ ಮಾತ್ರ ಸ್ನಾತಕ ಪದವಿಯ 3ನೇ ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಅವಕಾಶ ನೀಡಲು ಸೂಚಿಸಿದ ಹಿನ್ನಲೆಯಲ್ಲಿ, ಉಚ್ಚನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು ಡಿಸೆಂಬರ್–2017ರ ತಿಂಗಳಿನಲ್ಲಿ ವಿಶೇಷ ಪರೀಕ್ಷೆಯನ್ನು ಬರೆಯಲು ಅವಕಾಶ ಮಾಡಿ ಕೊಡಲಾಗಿತ್ತು. ಆದರೆ, ಮೇ/ಜೂನ್–2018 ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿ (4ನೇ ಮತ್ತು 6ನೇ ಸೆಮಿಸ್ಟರ್) ಪರೀಕ್ಷೆಗಳಿಗೆ ಅನ್ಯರಾಜ್ಯ ಹಾಗೂ ಅನ್ಯಮಂಡಳಿಯಿಂದ ಬಂದಿರುವ ಸಂಬಂಧಪಟ್ಟ 866 ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಯಾವುದೇ ಅನುಮತಿ ನೀಡಿರುವುದಿಲ್ಲ.

ಮುಂದುವರೆದು, ವಿಶ್ವವಿದ್ಯಾಲಯದಿಂದ ಅಂತಿಮ ತೀರ್ಮಾನ ನೀಡುವವರೆಗೂ ಪ್ರಾಂಶುಪಾಲರು ಸದರಿ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರವನ್ನು ಯಾವುದೇ ಕಾರಣಕ್ಕೂ ವಿತರಿಸಬಾರದು ಹಾಗೂ ಒಂದು ವೇಳೆ ಸದರಿ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರವನ್ನು ನೀಡಿದ್ದಲ್ಲಿ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆಂದು ಈ ಮೂಲಕ ತಮ್ಮಲ್ಲಿ ಸೂಚಿಸಲಾಗಿದೆ.

02/04/18

ಕುಲಸಚಿವರು (ಮೌಲ್ಯಮಾಪನ)

REGISTRAR (EVAL)
Vijayanagara Sri Krishnadevaraya University
Jnana Sagar Campus, Vinayakanagar
Cantonment, BALLARI-583 104.

ಗೆ,

ಪ್ರಾಂಶುಪಾಲರು, ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯ ಸ್ನಾತಕ ಮಹಾವಿದ್ಯಾಲಯಗಳು.

**ಪ್ರತಿಗಳು:**

1) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿ.ಶ್ರೀ.ಕೃ ವಿಶ್ವವಿದ್ಯಾಲಯ, ಬಳ್ಳಾರಿ ರವರ ಮಾಹಿತಿಗಾಗಿ.
2) ಕುಲಸಚಿವರು (ಆಡಳಿತ), ವಿ.ಶ್ರೀ.ಕೃ ವಿಶ್ವವಿದ್ಯಾಲಯ, ಬಳ್ಳಾರಿ ರವರ ಮಾಹಿತಿಗಾಗಿ.
3) ಕಛೇರಿ ಪ್ರತಿ.